ಹೋದರೆ ನನ್ನ ಮನೆ ಬಾಗಿಲಿಗೆ ಬಂದು ದೀನಳಾಗಿ ನಿಲ್ಲುತ್ತಿದ್ದಳು. ತಾನು ಭಿಕ್ಷೆ ಬೇಡುತ್ತಿದ್ದೇನೋ ಎನ್ನುವ ನೋವು ಅವಳನ್ನು ಕಾಡುತ್ತಿತ್ತು, ದೀನಳಾಗಿ ಅವಳು ನನ್ನ ಮುಂದೆ ನಿಂತಾಗ ನನಗೆ ಗೊತ್ತಾಗಿ ಬಿಡುತ್ತಿತ್ತು. ಅವಳಿಗೆ ನನ್ನಿಂದ ಏನೋ ಸಹಾಯ ಬೇಕಿದೆ ಎಂದು ಯೋಚಿಸುತ್ತಲೇ, 'ಹೇಳು ಕುಸುಮಾ ಏನು ಬೇಕು' ಎನ್ನುತ್ತಿದ್ದೆ. ಅವಳು ಮುಜುಗರ ಪಡುತ್ತಲೇ, 'ಒಂದು ಕೇಜಿ ಅಕ್ಕಿ ಕೊಟ್ಟಿರು ತೀರಿಸುತ್ತೇನೆ, ಮುನ್ನಳನ್ನು ಬೀಗ ಹಾಕಿ ಬಂದಿದ್ದೇನೆ. ಹೊರಡುತ್ತೇನೆ' ಎಂದು ಗಡಿಬಿಡಿ ತೋರಿಸುತ್ತಿದ್ದಳು. ನಾನು ಅಕ್ಕಿಯ ಜೊತೆಗೆ ಒಂದಿಷ್ಟು ತರಕಾರಿ ಕೊಟ್ಟು ಕಳಿಸುತ್ತಿದ್ದೆ. ಎಷ್ಟೊ ಸಾರಿ ಸಾಂಬಾರು ನಾನೇ ಕೊಟ್ಟು ಕಳಿಸುತ್ತಿದ್ದೆ. ಇಂಥ ಜೀವನದಲ್ಲಿದ್ದರೂ ಅವಳೆಂದೂ ಮುನ್ನಾಳಿಗೆ ಕೊರತೆ ಮಾಡುತ್ತಿರಲಿಲ್ಲ. ಗಂಡನನ್ನು ಬೈಯುತ್ತಿರಲಿಲ್ಲ.

ಬೆಳಗೆದ್ದರೆ ಮುನ್ನಳದ್ದೆ ಅವಳಿಗೆ ಕೆಲಸ. ಮುನ್ನಾಳಿಗೆ ಮಲಗಿದಲ್ಲೇ ಸ್ನಾನ ಮಾಡಿಸಿ ಅಂಗಿ ಬಟ್ಟೆ ತೊಡಿಸುತ್ತಿದ್ದಳು. ದಿನಕ್ಕೊಂದು ನಮೂನೆಯ ದಿರಸುಗಳು. ಮುನ್ನಳಿಗೆ ಅವಳು ಮಾಡುವುದೆಲ್ಲಾ ಗೊತ್ತಾಗುವಂತಿದ್ದರೆ ಅವಳ ಆನಂದಕ್ಕೆ ಎಣೆ ಇರುತ್ತಿತ್ತೇ ಎಂದು ಕೊಳ್ಳುತ್ತಿದ್ದೆ. ಪುಟ್ಟಪುಟ್ಟ ಹೆಜ್ಜೆ ಇಟ್ಟು ನನ್ನ ಮನೆಗೂ ಅಡ್ಡಾಡುವಂತಿದ್ದರೆ ಎಂದುಕೊಳ್ಳುತ್ತಿದ್ದೆ ನಾನು. ಆದರೆ ಇದನ್ನೆಂದೂ ನಾನು ಬಾಯಿ ಬಿಟ್ಟು ಕುಸುಮಾಳಿಗೆ ಹೇಳುತ್ತಿರಲಿಲ್ಲ. ಅವಳ ಎದೆಯಾಳದಲ್ಲಿ ನೋವಿದ್ದರೆ ಅದನ್ನು ಕೆದಕಲು ನನಗಿಷ್ಟವಾಗುತ್ತಿರಲ್ಲಿಲ್ಲ. ಎಷ್ಟೊ ವೇಳೆ ನಮ್ಮ ಮಾತಿನಿಂದ ದುಃಖಿತರ ನೋವನ್ನು ಶಮನ ಮಾಡಿದ್ದೇವೆ ಎಂದು ತಿಳಿದುಕೊಂಡಿರುತ್ತೇವೆ. ಆದರೆ ನಾನಂತು ಹಾಗಂದುಕೊಳ್ಳುತ್ತಿರಲಿಲ್ಲ. ನಮ್ಮ ಮಾತು ದುಃಖಿತರಿಗೆ ಅವರ ನೋವನ್ನು ನೆನಪು ಮಾಡಿದಂತಾಗಿ ಅವರ ದುಃಖ ಮತ್ತಷ್ಟು ಹೆಚ್ಚಲು ಕಾರಣವಾಗುತ್ತೇವೇನೋ ಎಂದು ನನಗನಿಸುತ್ತಿತ್ತು. ಯಾರ ಮನೋಧರ್ಮ ಹ್ಯಾಗಿರುತ್ತದೋ ನಮಗೇನು ಗೊತ್ತು ಎನ್ನುವ ಪರಿಜ್ಞಾನ ನನ್ನದಾಗಿರುತ್ತಿತ್ತು. ಆದ್ದರಿಂದ ನಾನು ಕುಸುಮಾಳ ಸ್ವಂತ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ವಿಷಯವನ್ನು ಪ್ರಸ್ತಾಪಿಸುತ್ತಿರಲಿಲ್ಲ.

ಕುಸುಮಾ ಮಾತ್ರ ತನ್ನ ನೋವನ್ನು ಎಂದೂ ಯಾರೊಂದಿಗೂ ಪ್ರಕಟಿಸಿದವಳಲ್ಲ. ಅವಳಿಗೆ ಗೊಂಬೆಯಂತಿರುವ ತನ್ನ ಮಗಳನ್ನು ಸಿಂಗರಿಸುವುದೆಂದರೆ ಎಲ್ಲಿಲ್ಲದ ಉತ್ಸಾಹ, ಪ್ರೀತಿ. ಮುನ್ನಾಳ ಮೇಲಿನ ಅವಳ ಪ್ರೀತಿ ವಾತ್ಸಲ್ಯ ಬತ್ತದ ಒರತೆ. ಕುಸುಮಾಳಿಗೆ ಎಷ್ಟೊಂದು ಸಹನೆ.

**ನಾನು ಮುನ್ನಾ ಮಲಗಿದಲ್ಲಿಗೆ ಬಂದೆ. ಕರುಳು ಕಿತ್ತು ಬಂತು ಅವಳನ್ನು ನೋಡಿ. ಅಂಗಾತ ಮಲಗಿರುವ ಮುನ್ನಾ ಮೊದಲಿಗಿಂತ ದಷ್ಟಪುಷ್ಟಳಾಗಿ ಬೆಳೆದಿದ್ದಾಳೆ. ಆದರೇನು ಪ್ರಯೋಜನ. ಯಥಾ ಸ್ಥಿತಿ. ನಡೆಯಿಲ್ಲ ನುಡಿಯಿಲ್ಲ. ಪಿಳಿಪಿಳಿ ಕಣ್ಣರಳಿಸಿ ನೋಡಿದಳು. ಹತ್ತಿರ ಹೋದೆ ಮುಖ ಸವರೋಣ ಎಂದು. ಕುಸುಮಾ 'ಮುಟ್ಟಬೇಡ...' ಎಂದಳು...**